# ಬಸವಣ್ಣನವರ ವಚನಗಳಲ್ಲಿ ಸಾಮಾಜಿಕ ಪ್ರಜ್ಞೆ


## ಪುಂಡಲೀಕ ಹೆಚ್. ಮಾದರ*



DOI: https://doi.org/10.5281/zenodo.21438578



**ABSTRACT**

ವ್ಯಕ್ತಿ ಮತ್ತು ಸಮಾಜದ ನಡುವಿನ ಸಾಮರಸ್ಯವೇ ಆರೋಗ್ಯಕರ ಬದುಕಿನ ಆಧಾರ ಎಂಬುದನ್ನು ಬಸವಣ್ಣನವರ ವಚನಗಳು ಮಾರ್ಮಿಕವಾಗಿ ನಿರೂಪಿಸಿವೆ. ಹನ್ನೆರಡನೇ ಶತಮಾನದ ಶರಣ ಚಳುವಳಿಯು ಮೇಲು-ಕೀಳು ಎಂಬ ಕೃತಕ ವರ್ಣವ್ಯವಸ್ಥೆಯನ್ನು ದಿಟ್ಟವಾಗಿ ಧಿಕ್ಕರಿಸಿತು; ಮನುಷ್ಯನ ಯೋಗ್ಯತೆಯು ಹುಟ್ಟಿನಿಂದಲ್ಲ, ಗುಣಕರ್ಮಗಳಿಂದ ನಿರ್ಧಾರವಾಗುತ್ತದೆ ಎಂದು ಸಾರಿತು. ಅಸ್ಪೃಶ್ಯತೆ ನಿವಾರಣೆ ಹಾಗೂ ಅಂತರ್ಜಾತೀಯ ವಿವಾಹದಂತಹ ಕ್ರಾಂತಿಕಾರಿ ಹೆಜ್ಜೆಗಳ ಮೂಲಕ ಸರ್ವಸಮಾನತೆಯ ಸಮಾಜ ನಿರ್ಮಾಣಕ್ಕೆ ಬಸವಣ್ಣನವರು ಭದ್ರ ಬುನಾದಿ ಹಾಕಿದರು. 'ಕಾಯಕ'ದ ಕಲ್ಪನೆಯು ಶ್ರಮದಾನ, ವೃತ್ತಿಗೌರವ ಮತ್ತು ಆರ್ಥಿಕ ಸುಭದ್ರತೆಯ ಮಹತ್ವವನ್ನು ಸಮಾಜಕ್ಕೆ ಮನದಟ್ಟು ಮಾಡಿದರೆ, 'ಅನುಭವ ಮಂಟಪ'ವು ಎಲ್ಲ ವರ್ಗದವರಿಗೂ, ಸ್ತ್ರೀಯರಿಗೂ ಮುಕ್ತವಾದ ಪ್ರಜಾಪ್ರಭುತ್ವದ ನೈಜ ಸಂಕೇತವಾಗಿ ರೂಪುಗೊಂಡಿತು. ಸ್ವಾತಂತ್ರ್ಯ, ಸಮಾನತೆ, ಭ್ರಾತೃತ್ವ ಮತ್ತು ದಯೆಯಂತಹ ಮೌಲ್ಯಗಳನ್ನು ಪ್ರತಿಪಾದಿಸುವ ಮೂಲಕ, ಡಾಂಭಿಕತೆ ಹಾಗೂ ಶೋಷಣೆಮುಕ್ತವಾದ ಸರ್ವೋದಯ ಸಮಾಜವನ್ನು ಕಟ್ಟುವಲ್ಲಿ ವಚನ ಸಾಹಿತ್ಯದ ತಾತ್ವಿಕ ನಿಲುವುಗಳು ಸಾರ್ವಕಾಲಿಕ ಪ್ರಸ್ತುತತೆಯನ್ನು ಹೊಂದಿವೆ.



**KEYWORDS:** ಸಾಮಾಜಿಕ ಪ್ರಜ್ಞೆ, ವಚನ ಸಾಹಿತ್ಯ, ಕಾಯಕ ಸಿದ್ಧಾಂತ, ಸರ್ವಸಮಾನತೆ, ಅನುಭವ ಮಂಟಪ.



* **ಪುಂಡಲೀಕ ಹೆಚ್. ಮಾದರ,** ಸಹಾಯಕ ಪ್ರಾಧ್ಯಾಪಕರು, ಕನ್ನಡ ವಿಭಾಗ, ಶ್ರೀ ಅನ್ನದಾನೇಶ್ವರ ಕಲಾ ವಿಜ್ಞಾನ ವಾಣಿಜ್ಯ ಮಹಾವಿದ್ಯಾಲಯ ಹಾಗೂ ಸ್ನಾತಕೋತ್ತರ ಕೇಂದ್ರ ನರೇಗಲ್ಲ, ಗಜೇಂದ್ರಗಡ, ಗದಗ.

ಸಮಾಜ, ವ್ಯಕ್ತಿಗಳಿಂದ ನಿರ್ಮಿತವಾದುದು; ಮತ್ತು ವ್ಯಕ್ತಿ ವಿಕಾಸಕ್ಕೆ ಸಹಾಯಕವಾಗಬೇಕಾದುದು. ಸಮಷ್ಟಿ ಸಹಕಾರದಿಂದ ವ್ಯಷ್ಟಿಹಿತ ಸಿದ್ಧಿಸುತ್ತದೆ. ವ್ಯಷ್ಟಿಸಿದ್ಧಿಯಿಂದ ಸಮಾಜಕ್ಕೆ ಮಾರ್ಗದರ್ಶನ ಲಭಿಸುತ್ತದೆ. ವ್ಯಷ್ಟಿ ಮತ್ತು ಸಮಷ್ಟಿ ಪರಸ್ಪರ ಅವಲಂಬಿಗಳು, ಮತ್ತು ಪೂರಕಗಳು. ಶರಣರ ಸಾಮಾಜಿಕ ವಿವೇಚನೆಯಲ್ಲಿ ಈ ಎರಡರ ಸಾಮರಸ್ಯವಿದೆ.

ಅನೇಕ ಸಂದರ್ಭಗಳಲ್ಲಿ ಈ ಎರಡಕ್ಕೂ ಸಾಮರಸ್ಯವಿಲ್ಲದ ವಿರಸವನ್ನು ಸಮಾಜ ಎದುರಿಸಬೇಕಾಗುತ್ತದೆ. ವ್ಯಕ್ತಿಯ ಮೂಲಭೂತವಾದ ಆಕಾಂಕ್ಷೆಯನ್ನು ಪೂರ್ಣಗೊಳಿಸಿಕೊಡುವುದರ ಬದಲು ಅದಕ್ಕೆ ಅಡ್ಡಿಯಾಗಿ ಪರಿಣಮಿಸುತ್ತದೆ. ಅಪೂರ್ಣ ದೃಷ್ಟಿಯಿಂದಾದ ಕೃತಕ ವಿಭಜನೆಯೇ ಇದಕ್ಕೆ ಕಾರಣ. ಇದನ್ನು ನಿವಾರಿಸಲು ಪೂರ್ಣದೃಷ್ಟಿಯಿಂದ ಜೀವನವನ್ನು ನೋಡಬಲ್ಲ 'ದರ್ಶನ'ಬೇಕು. ಹೀಗೆ ಪೂರ್ಣ ದೃಷ್ಟಿಯಿಂದ ಜೀವನವನ್ನು ನೋಡಿದ ಶರಣರು ಅಂದಿನ ಸಮಾಜದಲ್ಲಿ ವ್ಯಕ್ತಿಯ ಪೂರ್ಣವಿಕಾಸಕ್ಕೆ ಅಡ್ಡಿಯಾಗಿ ನಿಂತ ಕೃತಕ ವಿಭಜನೆಗಳನ್ನು ಕಂಡು ಸಿಡಿದು ನಿಂತಿರುವುದನ್ನು ಕಾಣುತ್ತೇವೆ.

ಇವುಗಳಲ್ಲಿ ಮುಖ್ಯವಾದುದು ವರ್ಣವಿಭೇದ. ಚತುರ್ವರ್ಣಗಳ ಮೂಲವೇನೆ ಇರಲಿ, ಅದರ ಹಿಂದಿರುವ ತತ್ವ ಎಂಥದೇ ಆಗಿರಲಿ. ಶರಣರ ಕಾಲಕ್ಕಾಗಲೇ ಈ ವರ್ಣಗಳು ವಿರೂಪ ಮಾರ್ಗವನ್ನು ಹಿಡಿದಿದ್ದವು. ಸಮಾಜವನ್ನು ಹೋಳುಹೋಳಾಗಿ ವಿಭಜಿಸಿದ್ದವು. ಬ್ರಾಹ್ಮಣ, ಕ್ಷತ್ರಿಯ, ವೈಶ್ಯ, ಶೂದ್ರ–ಎಂಬ ನಾಲ್ಕು ವರ್ಣಗಳ ಜೊತೆಗೆ 'ಅಸ್ಪೃಶ್ಯ'ರೆಂಬ ಪಂಚಮವರ್ಣವೂ ಹಿಂದೂಧರ್ಮಕ್ಕೆ ಹಿಡಿದ ಕಳಂಕವನ್ನು ಸಾರಿಹೇಳುತ್ತಿತ್ತು. 'ಚಾತುರ್ವರ್ಣ್ಯಂಮಯಾ ಸೃಷ್ಟಂ ಗುಣಕರ್ಮ ವಿಭಾಗಶಃ' ಎಂದು ಗೀತೆಯಲ್ಲಿ ಕೃಷ್ಣ ಹೇಳಿದ ಆದರ್ಶ ಎಂದೋ ಮರೆಯಾಗಿ, ಜನ್ಮದಿಂದ ಉತ್ತಮರೆನಿಸಿಕೊಂಡರು ಧರ್ಮವನ್ನು ತಮ್ಮ ಸ್ವಂತ ಸ್ವತ್ತನ್ನಾಗಿ ತಿಳಿದು ಸಾಮಾನ್ಯ ಜನರನ್ನು ಧರ್ಮದಿಂದ ವಂಚಿತರನ್ನಾಗಿ ಮಾಡಿದ್ದರು. ಧರ್ಮ ಅನೇಕ ವೇಳೆಗಳಲ್ಲಿ ಸ್ವಾರ್ಥಸಾಧನೆಯ ಮುಖವಾಡವಾಗಿತ್ತು. ಇದನ್ನು ತೀವ್ರವಾಗಿ ಪ್ರತಿಭಟಿಸಿ ತಮ್ಮ ಸಾಧನೆಯ ಶಕ್ತಿಯಿಂದ ಧರ್ಮದ ನಿಜಸ್ವರೂಪವನ್ನು ಉಜ್ವಲಗೊಳಿಸಿದರು ಶರಣರು;

**"ಕೊಲ್ಲುವವನೇ ಮಾದಿಗ**
**ಹೊಲಸು ತಿಂಬುವನೇ ಹೊಲೆಯ**
**ಕುಲವೇನೋ ಅವಂದಿರ ಕುಲವೇನೋ;**
**ಸಕಲ ಜೀವಾತ್ಮರಿಗೆ ಲೇಸನೇ ಬಯಸುವ**
**ನಮ್ಮ ಕೂಡಲಸಂಗನ ಶರಣರೆಲ್ಲ ಕುಲಜರು"**

ಎಂಬ ಬಸವಣ್ಣನವರ ಮಾತು ಶರಣರ ವಿಚಾರವಾದಕ್ಕೆ ಕಿರೀಟಪ್ರಾಯವಾಗಿದೆ. ಮನುಷ್ಯನ ಯೋಗ್ಯತೆಯನ್ನು ನಿರ್ಧರಿಸುವುದು ಅವನ ಹುಟ್ಟಿನಿಂದಲ್ಲ; ಅವನ ಆಚಾರ ವಿಚಾರಗಳಿಂದ, ಗುಣಕರ್ಮಗಳಿಂದ ಎಂದು ಬಸವಣ್ಣನವರು ಘೋಷಿಸಿದರು.

ಚುಟುಕದಲ್ಲಿ ಹೇಳುವುದಾದರೆ ಪ್ರತಿಯೊಬ್ಬ ಸಮಾಜದ ಒಂದು ಘಟಕ. ವ್ಯಕ್ತಿಗಳ ಹುರುಡು–ಬರಡಿನಲ್ಲಿ, ಏಳು–ಬೀಳಿನಲ್ಲಿ ಸಮಾಜದೂ ಪಾಲಿರುತ್ತದೆ; ಹಾಗೆಯೇ ಸಮಾಜದ್ದರಲ್ಲಿ ವ್ಯಕ್ತಿಗಳದು ಕೂಡ. ಸಮಾಜವೆಂದರೆ ನಮಾಜಿಗೆ ಸೇರಿದ ಅಥವಾ ರೈಲು ನಿಲ್ದಾಣದಲ್ಲಿ ಸೇರಿದ ಸಣ್ಣ ಸಣ್ಣ ಗುಂಪಿನಂಥಲ್ಲ; ಒಂದು ಕಡೆ ಬೇರೇ ಇರದ, ಬೇರೆ

ಬೇರೆಯಾಗಿರುವ ಮರಳಿನ ಕಣಗಳಂತಲ್ಲ. ಭಿನ್ನತೆಯಲ್ಲೂ ಅಭಿನ್ನತೆಯನ್ನು, ಅನೇಕತೆಯಲ್ಲೂ ಏಕತೆಯನ್ನು ಹೊಂದಿ, ರೀತಿ ನುಡಿನಡಾವಳಿಯಲ್ಲಿ ಸಾಮಾನ್ಯವಾಗಿ ಸರಿಸಮಾನ ಸ್ಪಂದನಗಳನ್ನು ಪಡೆದಿರುವ, ನೆಲದಲ್ಲಿ ಬೇರನ್ನು ಹಡೆದಿರುವ ಜನಗಳ ಗುಂಪಿಗೆ ಸಮಾಜ ಎನ್ನಬಹುದು, ವ್ಯಕ್ತಿ-ಸಮಾಜ ಒಂದಕ್ಕೊಂದು ಪೂರಕ, ಪೋಷಕ; ವ್ಯಕ್ತಿಗಳನ್ನುಳಿದು ಸಮಾಜವಿರಲಾರದು; ಸಮಾಜವನ್ನುಳಿದು ವ್ಯಕ್ತಿಗಳಿರಲಾರರು; ಇದ್ದರೂ ವ್ಯಕ್ತಿತ್ವವನ್ನು ಪಡೆಯಲಾರರು. ಉದಾಹರಣೆಗೆ, ಒಬ್ಬನನ್ನು ಎಳೆತನದಲ್ಲೇ ಸಮಾಜದಿಂದ ಬೇರ್ಪಡಿಸಿ ಕೆಲವು ಕಾಲ ಕಾಡಿನಲ್ಲಿ ಕೊಳೆ ಹಾಕಿದರೆ, ಆ ವ್ಯಕ್ತಿ ನಯ-ನಾಜೂಕುಗಳಲ್ಲಿ, ಭಾವನೆ-ಯೋಚನೆಗಳಲ್ಲಿ, ಬುದ್ಧಿಯ ಮೊಂಡು-ಮೊನಚುಗಳಲ್ಲಿ ಮನುಷ್ಯ ಸಹಜವಾದ ಗುಣಗಳಿಂದಲೇ ವಂಚಿತನಾಗಿ ಪಶುಸಮಾನನಾಗಬಹುದು. ಆದ್ದರಿಂದ ಒಟ್ಟಿನಲ್ಲಿ ವ್ಯಕ್ತಿ-ಸಮಾಜ ಒಂದೇ ನಾಣ್ಯದ ಎರಡು ಮುಖಗಳಿದ್ದ ಹಾಗೆ.

ಈ ಅವಿನಾಸಂಬಂಧ ಇರುವುದರಿಂದಲೇ ತೀವ್ರ ಸಂವೇದನಾಶೀಲ ವ್ಯಕ್ತಿಯ ಹೃದಯ ಸಮಾಜದ ಏರು-ಪೇರು, ನಾರು-ಗಾರು, ನೋವು-ನಲಿವು, ನ್ಯಾಯ-ಅನ್ಯಾಯಗಳನ್ನು ಕಂಡು ಪ್ರತಿಸ್ಪಂದಿಸುತ್ತದೆ. ಪ್ರತಿಕ್ರಿಯೆಯನ್ನು ವ್ಯಕ್ತಪಡಿಸುತ್ತದೆ; ಡೊಂಕನ್ನು ನೇರಗೊಳಿಸಲು, ಸುಂಕವನ್ನು ನಯಗೊಳಿಸಲು, ಸಾರ-ನೇರವಾದದ್ದನ್ನು ಎತ್ತಿ ಹಿಡಿಯಲು ಯತ್ನಿಸುತ್ತದೆ. ಕವಿಯಲ್ಲದವನು ಇದನ್ನು ತನ್ನ ಮಾತು-ಕೃತಿಯಲ್ಲಿ ವ್ಯಕ್ತಪಡಿಸಿದರೆ, ಕವಿಯಾದವನು ತನ್ನ ಕಾವ್ಯದಲ್ಲಿ ಕಂಡರಿಸುತ್ತಾನೆ. ಅವನು ಎಷ್ಟರಮಟ್ಟಿಗೆ ಸಮಾಜದ ನಡುವೆ ಬದುಕಿದ್ದ; ಮೌಲ್ಯ-ಅಪಮೌಲ್ಯಗಳನ್ನು ಗಮನಿಸಿದ್ದ; ಸಮಾಜದ ಏಳುಬೀಳುಗಳನ್ನು ಸ್ಥಿತ್ಯಂತರಗಳನ್ನು ತೀವ್ರವಾಗಿ ಅನುಭವಿಸಿದ್ದ; ಯಾವ ರೀತಿ ಇರಬೇಕೆಂದು ಕನಸು ಕಂಡು ನನಸು ಮಾಡಲು ಯತ್ನಿಸಿದ್ದ-ಎಂಬುದರ ಮೇಲೆ, ಆ ಕಾವ್ಯ ತನ್ನ ಕಲಾತ್ಮಕತೆಯೊಂದಿಗೆ ಪ್ರೋಜ್ವಲತೆಯನ್ನು, ಪ್ರಾಶಸ್ತ್ಯವನ್ನು ಪಡೆಯುತ್ತದೆ. ಕಾಲದ ಜನಜೀವನದ ನೆಲೆಬೆಲೆಗಳನ್ನು, ಆಶೋತ್ತರಗಳನ್ನು ಪ್ರತಿನಿಧಿಸಿ ಕವಿ ತನ್ನ ಕೃತಿಗೆ ಸಮಕಾಲೀನತೆಯನ್ನು ಸಾರ್ವಕಾಲೀನತೆಯನ್ನು ತಂದುಕೊಡುತ್ತಾನೆ. ಇದನ್ನು ನಿರ್ಲಕ್ಷಿಸಿ, ತನ್ನ ಕಲ್ಪನೆಯ ಕೋಟೆಯಲ್ಲೇ ಬಂಧಿತನಾಗಿ ಬರೆದರೆ ಅವನ ಕೃತಿ ಅಷ್ಟೂ ಕೃತಕವಾಗುತ್ತದೆ. ಕುಬ್ಜವಾಗುತ್ತದೆ.

ಸಮಕಾಲೀನತೆ ಎಂಬ ಮಾತನ್ನು ಮೇಲೆ ಹೇಳಿದೆ. ಸಮಕಾಲೀನ ಪ್ರಜ್ಞೆ ಸಮುದ್ರವಿದ್ದ ಹಾಗೆ. ಎಲ್ಲ ಕಡೆಯಿಂದ ಬಂದ ಎಲ್ಲ ನದಿಗಳ ನೀರನ್ನು ತನ್ನ ಬಸುರಲ್ಲಿ ಅಡಗಿಸಿಕೊಂಡ ಹಾಗೆ ಈ ಸಮಕಾಲೀನ ಪ್ರಜ್ಞೆ ಮಿಕ್ಕೆಲ್ಲ ಪ್ರಜ್ಞೆಗಳನ್ನು-ಪಾರಂಪರಿಕ, ಆಗಮಿಕ, ಸಾಮಾಜಿಕ, ಧಾರ್ಮಿಕ, ನೈತಿಕ, ಆರ್ಥಿಕ, ರಾಜಕೀಯ ಒಳಗೊಳ್ಳುತ್ತದೆ. ಅಂದರೆ ಸಾಮಾಜಿಕ ಪ್ರಜ್ಞೆ ಸಮಕಾಲೀನ ಪ್ರಜ್ಞೆಯ ಒಂದು ಅಂಗವೆಂದಂತಾಯಿತು. ಮತ್ತೊಂದು ದೃಷ್ಟಿಯಲ್ಲಿ ನೋಡಿದರೆ ಸಾಮಾಜಿಕ ಪ್ರಜ್ಞೆಯಲ್ಲಿಯೇ ಹಿಂದೆ ಹೇಳಿದ ಎಲ್ಲ ಪ್ರಜ್ಞೆಗಳೂ ಅಡಗಿಕೊಂಡಿವೆ ಎನ್ನಬಹುದು. ಸಮಾಜಕ್ಕಾಗಿಯೇ ನೀತಿ, ಧರ್ಮ, ಅರ್ಥ, ಆಡಳಿತ ಅಸ್ತಿತ್ವವನ್ನು ಪಡೆದದ್ದು. ಆದ್ದರಿಂದ ಒಂದರ್ಥದಲ್ಲಿ ಸಾಮಾಜಿಕ ಪ್ರಜ್ಞೆ ಇವೆಲ್ಲವುಗಳನ್ನೂ ಅಷ್ಟೋ ಇಷ್ಟೋ ಪ್ರಮಾಣದಲ್ಲಿ ಒಳಗೊಂಡಿರುತ್ತದೆ ಎಂದರೆ ತಪ್ಪಾಗಲಾರದು. ಈ ಕಾರಣದಿಂದಾಗಿ, ಬಸವಣ್ಣನವರ ವಚನಗಳಲ್ಲಿ ಸಾಮಾಜಿಕ ಪ್ರಜ್ಞೆ ಎಂಬುದನ್ನು ಪರಿಶೀಲಿಸುವಾಗ ನೈತಿಕ, ಧಾರ್ಮಿಕ ಪ್ರಜ್ಞೆಗಳೂ ಅನಿವಾರ್ಯವಾಗಿ ನುಸುಳಿ ಬರಬಹುದು.

ಅಂದು ಸಮಾಜದಲ್ಲಿ ತಾಂಡವವಾಡುತ್ತಿದ್ದ ವರ್ಣವ್ಯವಸ್ಥೆ ಅವರಿಗೆ ಹಿಡಿಸಲಿಲ್ಲ. ಇದೆಲ್ಲ ಕೃತಕ ವಿಭಜನೆ; ಮನುಷ್ಯಜಾತಿ ಒಂದೇ ಎನ್ನಿಸಿತು. ಹುಟ್ಟಿನಿಂದಲೇ ಒಬ್ಬನು ಮೇಲು ಅಥವಾ ಕೀಳು ಎಂಬುದನ್ನು ಒಪ್ಪಿಕೊಳ್ಳಲು ಮನಸ್ಸು ಹಿಂಜರಿಯಿತು. ಅನೂಚಾನವಾಗಿ

ಬಂದದ್ದೆಲ್ಲ ನಿರ್ವಿವಾದವೆಂದು ಅವಿಚಾರವಾಗಿ ಅನುಸರಿಸುವ ಅಂಧಶ್ರದ್ಧೆಯ ಮಂದಬುದ್ಧಿಯ ಗುಂಪಿಗೆ ಸೇರದ ಬಸವಣ್ಣನವರು, ಜಾತಿವಾದಿಗಳ ಜ್ವರ ಬಿಡಿಸುವಂತೆ ಸಾರಿದರು:

**ನೆಲನೊಂದೇ ಹೊಲಗೇರಿ ಶಿವಾಲಯಕ್ಕೆ**
**ಜಲವೊಂದೇ ಶೌಚಾಚಮನಕ್ಕೆ**
**ಕುಲನೊಂದೇ ತನ್ನ ತಾನರಿದಂಗೆ....**

ಅಷ್ಟೇ ಅಲ್ಲ. ಹೊಲೆಯ ಯಾರು? ಮಾದಿಗ ಯಾರು? ಎಂಬುದನ್ನು ತುಂಬ ಸುಂದರವಾಗಿ, ಕೆಲವರಿಗೆ ಹೃದಯಭೇದಕವಾಗಿ ಹೇಳಿದ್ದಾರೆ; "ಕೊಲ್ಲುವವನೇ ಮಾದಿಗ : ಹೊಲಸು ತಿಂಬುವನೇ ಹೊಲೆಯ" ಯಾವ ಕುಲದವನೇ ಆಗಿರಲಿ ಹೊಲಸು ಕೆಲಸಮಾಡಿದರೆ ಅವನು ಹೀನ; ಹೀನಕುಲದವನಾದರೂ ಉನ್ನತಗುಣಗಳಿಂದ ಕೂಡಿದ್ದರೆ ಶ್ರೇಷ್ಠ–ಎಂಬ ಮಾತು, ಅವರ ಗಟ್ಟಿ ಬಾಳಿನ ದಿಟ್ಟಿಗೆ ನಿದರ್ಶನ. ದಿವಂಗತ ಟಿ. ಪಿ. ಕೈಲಾಸಂ ಅವರು ತಮ್ಮ "ನಂ ಬ್ರಾಹ್ಮಣ್ಕೆ" ಎಂಬ ನಾಟಕದಲ್ಲಿ "ಒ" ಎಂದು ಇಪ್ಪತ್ತನೆಯ ಶತಮಾನದಲ್ಲಿ ಹೇಳಿದ ಮಾತನ್ನು ಬಸವಣ್ಣನವರು ಎಂಟನೂರು ವರ್ಷಗಳ ಹಿಂದೆಯೇ

**"ಸೆಟ್ಟಿಯೆಂದೆಂಬೆನೆ ಸಿರಿಯಾಳನ?**
**ಮಡಿವಾಳನೆಂದೆಂಬೆನೆ ಮಾಚಯ್ಯನ?**
**ಡೋಹಾರನೆಂದೆಂಬೆನೆ ಕಕ್ಕಯ್ಯನ?**
**ಮಾದಾರನೆಂದೆಂಬೆನೆ ಚನ್ನಯ್ಯನ?**
**ಆನು ಹಾರುವನೆಂದರೆ ಕೂಡಲಸಂಗಯ್ಯ ನಗುವಯ್ಯ"**

ಎಂದು ಹೇಳಿ, "ಅವರ ಜಾತಿ ಮುಖ್ಯವಲ್ಲ; ಅವರ ಸಾಧನೆ ಮುಖ್ಯ ಎಂಬುದನ್ನು ಜನತೆಯ ಮುಂದಿಟ್ಟದ್ದು ಬಸವಣ್ಣನವರ ಕ್ರಾಂತಿಕಾರಕ ಮನೋಭಾವನೆಯ ಪ್ರತೀಕ; ವಿಚಾರ ಕ್ರಾಂತಿಯ ಸಂಕೇತ. ಅವರ ಈ ಮನೋವೈಶಾಲ್ಯ ಕೇವಲ ಉಪದೇಶದ ಮಟ್ಟದಲ್ಲೇ ಇದ್ದರೆ ಬೆಲೆ ಬರುತ್ತಿರಲಿಲ್ಲ; ಅವರು ನುಡಿದಂತೆ ನಡೆದು ತೋರಿಸುವವರು. 'ಆಡುವುದು ಚಳಿ; ಮಾಡುವುದು ಬೇಸಗೆ' ಎಂಬ ಪ್ರವೃತ್ತಿಯವರಲ್ಲ. ಅನುಭವ ಮಂಟಪದಲ್ಲಿ ಎಲ್ಲ ಜಾತಿಯವರಿಗೂ ಪ್ರವೇಶಾವಕಾಶವನ್ನು ನೀಡಿದ್ದು; ಅಸ್ಪೃಶ್ಯ ಹರಳಯ್ಯನ ಮನೆಗೆ ಹೋಗಿ ಪ್ರಸಾದ ಸ್ವೀಕರಿಸಿದ್ದು; ಅಷ್ಟೇ ಅಲ್ಲ, ಹರಳಯ್ಯನ ಮಗ ಶೀಲಯ್ಯನಿಗೂ ಬ್ರಾಹ್ಮಣ ಮಧುವರಸನ ಮಗಳು ನೀಲಗಳಿಗೂ ಮದುವೆ ಮಾಡಿಸುವ ಎದೆಗಾರಿಕೆಯನ್ನೂ ಪ್ರಾಮಾಣಿಕತೆಯನ್ನೂ ತೋರಿಸಿದ್ದು–ನುಡಿದಂತೆ ನಡೆದು ತೋರಿಸುವ ವಾಸ್ತವಿಕತೆಯ ಕುರುಹು. ಈ ಯುಗದಲ್ಲಿ ಅಂತರ್ಜಾತೀಯ ವಿವಾಹ ಅಷ್ಟಾಗಿ ಆಶ್ಚರ್ಯವನ್ನು ಉಂಟು ಮಾಡುವುದಿಲ್ಲ. ಆದರೆ ಎಂಟು ನೂರು ವರ್ಷಗಳ ಹಿಂದೆ, ಜಾತಿಮತವೆಂದರೆ ಅಪಾರ 'ಮಡಿ ಪ್ರಜ್ಞೆ' ಇದ್ದ ಕಾಲದಲ್ಲಿ ಇಂಥ ಎದೆಗಾರಿಕೆಯ ಕ್ರಮವನ್ನು ಜರುಗಿಸಿದ್ದು ನಿಜವಾಗಿಯೂ ಎದೆ ನಡುಗಿಸುವಂಥದು. ಸುವ್ಯವಸ್ಥಿತ ಸುನಿರ್ಮಲ ಸಮಾಜದ ಶಂಕು ಸ್ಥಾಪನೆಯ ಸಂಕೇತ. ಈ ಜಾತಿಪದ್ಧತಿಯ ನಿರ್ಮೂಲನ ಅವರ ಸಾಮಾಜಿಕ ಪ್ರಜ್ಞೆಯನ್ನು ಸಾರುತ್ತದೆ.

"ಅನ್ಯರ ಮನೆಗೆ ಹೋಗಿ ತನ್ನುದರವ ಹೊರೆಯದ ಅಚ್ಚ ಶರಣರ ಕಂಡರೆ ನಿಶ್ಚಯವಾಗಿ ಕೂಡಲ ಸಂಗಯ್ಯನೆಂಬೆ" ಎಂಬ ಮಾತಿನಲ್ಲಿ ಬಸವಣ್ಣವರು, ಪ್ರತಿಯೊಬ್ಬರೂ ಅವರವರ ಅನ್ನವನ್ನು ಗಳಿಸಲು ದುಡಿಯಬೇಕು; ಸಮಾಜಕ್ಕೆ ಬಂದಳಿಕೆಗಳಾಗದೆ, ಸೋಮಾರಿತನ ಮತ್ತು ಮೈಗಳ್ಳತನದಿಂದ ನೆರೆಹೊರೆಗೆ ಹೊರೆಯಾಗದೆ ತಮ್ಮ ಪಾಲಿನ

ಕೆಲಸವನ್ನು ಮಾಡಬೇಕು; ಕಾಯಕದಿಂದ ಬಂದ ಕಾರೆಯ ಸೊಪ್ಪಾದರೂ ಲಿಂಗಕ್ಕೆ ಶ್ರೇಷ್ಠ ಎಂದು ಕಾಯಕದ ಮಹತ್ವವನ್ನು ಸಮಾಜಕ್ಕೆ ಮನದಟ್ಟು ಮಾಡಿಕೊಟ್ಟರು. ನಿಜವಾಗಿಯೂ ಈ ಕಾಯಕದ ಕಲ್ಪನೆ ಸರ್ವೋದಯ ಸಮೃದ್ಧ ಸಮಾಜಕ್ಕೆ ಒಂದು ದೊಡ್ಡ ಕೊಡುಗೆ. ಅಥವಾ ವೃತ್ತಿಗೌರವ ಈ ಕಾಯಕದಲ್ಲಡಗಿದೆ.

**ಕಾಸಿ ಕಮ್ಮಾರನಾದ, ಬೀಸಿ ಮಡಿವಾಳನಾದ**
**ಹಾಸನಿಕ್ಕಿ ಸಾಲಿಗನಾದ, ವೇದನೋದಿ ಹಾರುವನಾದೆ....**

ಎಂಬ ಮಾತು ವೃತ್ತಿಗೌರವವನ್ನು ಸಾರುತ್ತದೆ. ಪ್ರತಿಯೊಬ್ಬರೂ ದುಡಿಯಬೇಕು; ತನಗೆಬೇಕಾದಷ್ಟಕ್ಕಿಂತ ಹೆಚ್ಚಿಗೆ ತಾನು ಬಚ್ಚಿಟ್ಟುಕೊಳ್ಳಬಾರದು; ಆಗ ಎಲ್ಲರಿಗೂ ಸಮಾನ ಅವಕಾಶ, ಸಮಾನ ಸೌಲಭ್ಯ ದೊರಕುತ್ತದೆ ಎಂಬ ಪವಿತ್ರ ಧ್ಯೇಯ ಕಾಯಕ ಎಂಬ ಮಾತಿನಲ್ಲಿತ್ತು. ಅಥವಾ 'ದುಡಿಮೆಯೇ ದೇವರು'; ಕರ್ತವ್ಯವೇ ಕರ್ತಾರನ ಪೂಜೆ ; ಶ್ರಮದಾನ ಮುಂತಾದ ಈ ಯುಗದ ಸ್ಲೋಗನ್ನುಗಳು, ಎಂಟನೂರು ವರ್ಷಗಳ ಹಿಂದೆ ಬಸವಣ್ಣ ಮೊದಲಾದ ಶರಣರು ಕಂಡು ಪ್ರಚಾರಪಡಿಸಿದ 'ಕಾಯಕ'ದ ಕಲ್ಪನೆಯಲ್ಲಿ ಅಡಗಿವೆ. ಸಮಾಜದ ಸುಭದ್ರತೆಗೆ ಕಾಯಕ ಸಹಾಯಕವಾಗುತ್ತದೆ ಎಂಬ ಆರ್ಥಿಕ ದೃಷ್ಟಿ ಅವರಿಗಿತ್ತು. ಆರ್ಥಿಕ ಅಭದ್ರತೆ ಇದ್ದರೆ ಸುಭದ್ರತೆ ಸಾಧ್ಯವಿಲ್ಲವೆಂಬ ಸಾಮಾಜಿಕ ಪ್ರಜ್ಞೆಯೂ ಅವರಲ್ಲಿತ್ತು.

ಹೊಸ ಸಮಾಜದ ವ್ಯವಸ್ಥೆಗೆ ಕರೆಕೊಟ್ಟ ಬಸವಣ್ಣನವರು ಅಲ್ಲಮ ಮೊದಲಾದ ಉಳಿದ ಶರಣರೊಡನೆ ಎದುರಾದ ಸಮಸ್ಯೆಗಳನ್ನು ಚರ್ಚಿಸಲು, ಬಿಡಿಸಲು 'ಅನುಭವ ಮಂಟಪ'ವನ್ನು ಸ್ಥಾಪಿಸಿದ್ದು ನಿಜವಾಗಿಯೂ ಅವರ ಸಾಮಾಜಿಕ ಪ್ರಜ್ಞೆಯ ಸಂಕೇತವೇ. ಸಮಾಜ ಎಚ್ಚರವಾಗಬೇಕಾದರೆ, ಸಮಾಜದಲ್ಲಿರುವ ವ್ಯಕ್ತಿಗಳು ಎಚ್ಚರವಾಗಬೇಕು. ಅದಕ್ಕೊಂದು ಸಂಸ್ಥೆ; ನೆಲೆಬೇಕು, ಆ ನೆಲೆಯಿಂದ ಬೆಲೆ ಹರಿದು ಬರಬೇಕು; ಸುವ್ಯವಸ್ಥಿತ ರೀತಿಯಲ್ಲಿ ವಿಚಾರಕ್ರಾಂತಿ ಆಗಬೇಕು ಎಂಬ ಭಾವನೆ ಅದರ ತಳಪಾಯವಾಗಿದೆ. ಆ ರೀತಿ ಸಂಘಟಿಸದಿದ್ದರೆ ಸಮಾಜವನ್ನು ಎಚ್ಚರದಿಂದ ಎಚ್ಚರಿಸಲು ಸಾಧ್ಯವಾಗುತ್ತಿರಲಿಲ್ಲವೇನೋ! ಅಷ್ಟೇ ಅಲ್ಲದೆ, ಅದರಲ್ಲಿ ಎಲ್ಲ ಕಾಯಕದ, ಎಲ್ಲ ಜಾತಿಯ ಜನರಿಗೂ ಭಾಗವಹಿಸಲು ಅವಕಾಶ ಕಲ್ಪಿಸಿಕೊಟ್ಟದ್ದು ಮತ್ತು ಸ್ತ್ರೀಯರಿಗೂ ಪ್ರವೇಶಾವಕಾಶಬೇಕೆಂದಿದ್ದ ಸರ್ವೋದಯ ಸಮಾಜದ ಸರ್ವಸಮಾನತೆಯ ಕುರುಹು. ಜನಪದ ಸಮೂಹವನ್ನೇ ಎಚ್ಚರಗೊಳಿಸುವ 'ಪ್ರತಿನಿಧಿಸುವ' ಪ್ರತಿಧ್ವನಿಸುವ ಅಚುನಾಯಿತ ಶಾಸಕರ 'ವಿಧಾನಸಭೆ' ಎನ್ನಬಹುದು. ಅಂದಿನ ಅನುಭವ ಮಂಟಪವನ್ನು! ಹೀಗೆ ವಿಚಾರ ಕ್ರಾಂತಿಗೆ, ಸಮಾಜಕ್ರಾಂತಿಗೆ ಸಹಾಯಕವಾಗುವಂಥ ಸಂಸ್ಥೆಯನ್ನು ರೂಪಿಸಿದ್ದು ಬಸವಣ್ಣನವರ ಸಾಮಾಜಿಕ ಪ್ರಜ್ಞೆಯನ್ನು ವ್ಯಕ್ತಪಡಿಸುತ್ತದೆ.

ಸಮಾಜದ ಕುಂದುಕೊರತೆಗಳನ್ನು, ಸುಳ್ಳು ವಂಚನೆಗಳನ್ನು ಡಾಂಬಿಕತೆಯನ್ನು ಕಂಡಾಗ ಆಶುಕವಿತೆಯಂತೆ ವಚನ ಮೂಡಿಬರುತ್ತಿದ್ದುದರಿಂದ, ಸಾಮಾಜಿಕ ಪ್ರಜ್ಞೆ ಅನಿವಾರ್ಯ ಗುಣವಾಗಿದೆ. ಉದಾಹರಣೆಗೆ

**ಎಲವೋ ಎಲವೋ ಪಾಪಕರ್ಮನ ಮಾಡಿದವನೇ**
**ಎಲವೋ ಎಲವೋ ಬ್ರಹ್ಮ ಹತ್ಯವ ಮಾಡಿದವನೇ**
**ಒಮ್ಮೆ ಶರಣೆನ್ನೆಲವೋ...**

ಎಂಬ ವಚನ, ಸಮಾಜದಲ್ಲಿ ಪಾಪ ಮಾಡಿದ ವ್ಯಕ್ತಿಯನ್ನು ಕಂಡು, ಅನುಕಂಪ

ಮೂಡಿ ಜೊತೆಗೆ ಸಾತ್ವಿಕ ಕೋಪವೂ ಮೂಡಿ ಸಿಡಿದು ಬಂದದ್ದೆಂದು ಸಂಬೋಧನೆಯ ಧಾಟಿಯೇ ತಿಳಿಸುತ್ತದೆ, ಜನರ ಮಧ್ಯೆ ಬಾಳಿ ಬದುಕಿದ, ಅವರ ಕಷ್ಟಸುಖಗಳಲ್ಲಿ ಭಾಗಿಯಾದ ಜೀವಕ್ಕೆ ಸಾಮಾಜಿಕ ಪ್ರಜ್ಞೆ ಅನಿವಾರ್ಯಗುಣವಾಗಿ ಬಂದಿದೆ ಎನ್ನಬಹುದು.

ಒಟ್ಟಿನಲ್ಲಿ ಸ್ವಾತಂತ್ರ್ಯ, ಸರ್ವ ಸಮಾನತೆ, ಭ್ರಾತೃತ್ವ ಬಸವಣ್ಣನವರ ಆದರ್ಶ ಸಮಾಜದ ಮೌಲ್ಯಗಳು ಎನ್ನಬಹುದು. ವರ್ಣ ನಿರ್ಮೂಲನೆ, ಕಾಯಕದ ಮಹತ್ವ, ಸುಳ್ಳು ಮೋಸ ಬಡಿವಾರಗಳನ್ನು ತೊಡೆದು ಹಾಕುವ ಪ್ರಯತ್ನ–ಎದ್ದು ಕಾಣುತ್ತವೆ. ಭಕ್ತಿಗೆ, ದಯೆಗೆ, ವಿನಯಕ್ಕೆ ಪ್ರಾಶಸ್ತ್ಯ ಕೊಟ್ಟಿರುವುದನ್ನು ಕಾಣುತ್ತೇವೆ. ಪ್ರಜಾ ಪ್ರಭುತ್ವದ ಕನಸು ಕಂಡಿರುವುದೂ ಕೂಡ ವೇದ್ಯವಾಗುತ್ತದೆ. ಇಷ್ಟೆಲ್ಲ ಸರ್ವಸಮಾನತೆಯ ಸ್ವಾತಂತ್ರ್ಯದ ಸಮಾಜವನ್ನು ಕನಸು ಕಂಡು ಅವರು ಮತ್ತೊಂದು ಮಾತನ್ನು ಹೇಳಿರುವುದು ತುಂಬಾ ಅರ್ಥವತ್ತಾಗಿದೆ.

**ಪರಾಮರ್ಶನ ಗ್ರಂಥಗಳು:**


1. ಹಿರೇಮಠ ಆರ್. ಸಿ. (ಸಂ.), (1968), ಬಸವಣ್ಣನವರ ವಚನಗಳು, ಧಾರವಾಡ: ಕರ್ನಾಟಕ ವಿಶ್ವವಿದ್ಯಾಲಯ.
2. ತಿಪ್ಪೇರುದ್ರಸ್ವಾಮಿ ಎಚ್., (1975), ಶೂನ್ಯ ಸಂಪಾದನೆ: ವಿವರಣಾತ್ಮಕ ಪರಿಚಯ, ಮೈಸೂರು: ಡಿ. ವಿ. ಕೆ. ಮೂರ್ತಿ ಪ್ರಕಾಶನ.
3. ಮರುಳಸಿದ್ದಪ್ಪ ಕೆ. (ಸಂ.), (1980), ವಚನ ಕಮ್ಮಟ, ಬೆಂಗಳೂರು: ಪ್ರಸಾರಾಂಗ, ಬೆಂಗಳೂರು ವಿಶ್ವವಿದ್ಯಾನಿಲಯ.
4. ಸಂಗಮೇಶ ಸವದತ್ತಿಮಠ (ಸಂ.), (2001), ವಿಷಯ ವಚನ ಸಂಪುಟಗಳು–ಸಂ.8, ಬೆಂಗಳೂರು: ಕನ್ನಡ ಪುಸ್ತಕ ಪ್ರಾಧಿಕಾರ.
5. ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ, (1998), ಬಸವ ಪರುಷ, ಮೈಸೂರು: ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾನಿಲಯ.
6. ಬಸವರಾಜ ಜಿ. ಅಮ್ಮಣಗಿ, (2000), ವಿಶ್ವಪ್ರವಾದಿ ಬಸವಣ್ಣನವರು, ಮೈಸೂರು: ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ತು.
7. ತಿಪ್ಪೇರುದ್ರಸ್ವಾಮಿ ಎಚ್., (1963), ಶರಣರ ಅನುಭಾವ ಸಾಹಿತ್ಯ, ಮೈಸೂರು: ಡಿ. ವಿ. ಕೆ. ಮೂರ್ತಿ ಪ್ರಕಾಶನ.
8. ನಾಗಭೂಷಣ ಓ. ಎಲ್. (ಸಂ.), (2004), ವಚನ ಸಾವಿರ, ಬೆಂಗಳೂರು: ಅಭಿನವ ಪ್ರಕಾಶನ.
9. ಹೆಂಡಿ ಬಿ. ಬಿ. (ಸಂ.), (1980), ಬಸವೇಶ್ವರ, ಧಾರವಾಡ: ಪ್ರಸಾರಾಂಗ, ಕರ್ನಾಟಕ ವಿಶ್ವವಿದ್ಯಾಲಯ.